**ಸಾಕ್ಷಿಗೆ ದಿನಾಂಕಃ06-08-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ವಾದಿ ಪರ ಶ್ರೀ.SNM ವಕೀಲರಿಂದ ::**

ನನ್ನ ಸ್ವಂತ ಊರು ಅಜ್ಜಂಪುರ ತಾಲ್ಲೂಕಿನ ಜಾವೂರು ಆಗಿರುತ್ತದೆ. ನಾನು ಪ್ರಸ್ತುತದಲ್ಲಿ ಅಜ್ಜಂಪುರ ಪೇಟೆಯಲ್ಲಿ ವಾಸ ಮಾಡಿಕೊಂಡಿರುತ್ತೇನೆ. ನನಗೆ ಒಬ್ಬ ಮಗ ಹಾಗೂ ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ನನ್ನ ಮಗ ಕೂಲಿ ಕೆಲಸ ಮಾಡಿಕೊಂಡಿರುತ್ತಾನೆ. ನಾನು ಜಾವೂರಿನಿಂದ ಅಜ್ಜಂಪುರ ಪೇಟೆಗೆ ಬಂದು ಸುಮಾರು 40 ವರ್ಷಗಳು ಆಗಿರುತ್ತದೆ. ಜಾವೂರಿನಲ್ಲಿ ನನಗೆ ಸುಮಾರು 20 ಗುಂಟೆ ಜಮೀನು ಇರುತ್ತದೆ. ಅಜ್ಜಂಪುರ ಪೇಟೆಯಿಂದ ಜಾವೂರು 10-12 ಕಿಮೀ ದೂರ ಇರುತ್ತದೆ ಎಂದರೆ ಸರಿ. ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ನಾನು ಉಳುಮೆ ಮಾಡುತ್ತಿರುವ ಬಗ್ಗೆ ಅಲ್ಲಿನ ಗ್ರಾಮಸ್ಥರಿಗೆ ತಿಳಿದಿರುತ್ತದೆ. ಆ ರೀತಿ ನಾನು ಉಳುಮೆ ಮಾಡುವುದನ್ನು ಗೋವಿಂದಪ್ಪ ಮತ್ತು ಇತರರು ನೋಡಿರುತ್ತಾರೆ. ಗೋವಿಂದಪ್ಪ ಬಿಟ್ಟು ಬೇರೆಯವರ ಹೆಸರು ನನಗೆ ಗೊತ್ತಿಲ್ಲ. ನಾನು ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ಉಳುಮೆ ಮಾಡಲು ರಾಮಚಂದ್ರಪ್ಪ ರವರ ಟ್ರಾಕ್ಟರ್ ಅನ್ನು ಬಾಡಿಗೆಗೆ ತೆಗೆದುಕೊಂಡಿರುತ್ತೇನೆ. ಈ ವರ್ಷ ಮಳೆ ಇಲ್ಲದ ಕಾರಣ ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ನಾವು ಯಾವುದೇ ಬೆಳೆ ಹಾಕಿರುವುದಿಲ್ಲ. ಕಳೆದ ವರ್ಷವು ಸಹ ಯಾವುದೇ ಬೆಳೆ ಹಾಕಿರುವುದಿಲ್ಲ.

ವಾದಿಯನ್ನು ನಾನು ಹಿಂದೆ ನೋಡಿರುತ್ತೇನೆ. ವಾದಿಗೆ ನಾನು, ನನ್ನ ತಂದೆ 16.07.1986 ರಂದು ನಮ್ಮ ಕುಟುಂಬದ ಸಾಲ ತಿರುವಳಿಗಾಗಿ ದಾವಾ ಶೆಡ್ಯೂಲ್ ಸ್ವತ್ತನ್ನು 20 ಸಾವಿರ ರೂಪಾಯಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಸ್ವತ್ತನ್ನು ನನ್ನ ತಂಗಿ ಲಕ್ಷ್ಮಿದೇವಿ ರವರ ಮದುವೆಯ ಖರ್ಚಿಗೂ ಸಹ ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿಯೇ ದಾವಾ ಶೆಡ್ಯೂಲ್ ಸ್ವತ್ತಿನ ಸ್ವಾಧೀನವನ್ನು ವಾದಿಗೆ ನಾವು

ಬಿಟ್ಟು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಹೂಡುವ ಪೂರ್ವದಲ್ಲಿ ವಾದಿ ನನಗೆ ನೋಟೀಸ್ ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ.

ನಿಪಿ4 ರಲ್ಲಿ ಇರುವ ರಂಗಪ್ಪ ಎಂದು ಬರೆದಿರುವ ಸಹಿ ನನ್ನ ತಂದೆಯದ್ದಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ4 ನ್ನು ಸಾಕ್ಷಿದಾರರ ಸಮಕ್ಷಮ ಮಾಡಿದ್ದು ಸದರಿ ಸಮಯದಿಂದ ವಾದಿಯೇ ದಾವಾ ಶೆಡ್ಯೂಲ್ ಸ್ವತ್ತಿನ ಉಳುಮೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ4 ಕ್ಕೆ ನನ್ನ ತಮ್ಮ 2 ನೇ ಪ್ರತಿವಾದಿ ಸಹ ಸಹಿ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಆತನಿಗೂ ಸಹ ನೋಟೀಸ್ ಜಾರಿ ಆಗಿದ್ದರೂ ಅವರು ಯಾವುದೇ ಪ್ರತ್ಯುತ್ತರ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತಿನ ಅರ್ಧ ಭಾಗದಲ್ಲಿ ನಾನು ಸ್ವಾಧೀನದಲ್ಲಿ ಇನ್ನುಳಿದ ಅರ್ಧ ಭಾಗದಲ್ಲಿ 2 ನೇ ಪ್ರತಿವಾದಿ ಸ್ವಾಧೀನದಲ್ಲಿ ಇರುತ್ತಾರೆ.

ನಿಪಿ4 ರಂತೆ ನಾನು ನನ್ನ ತಂದೆ 2 ನೇ ಪ್ರತಿವಾದಿ ಕ್ರಯದ ಕರಾರು ಪತ್ರವನ್ನು ವಾದಿಗೆ ಮಾಡಿಕೊಟ್ಟಿದ್ದರೂ ಸಹ ನಂತರದಲ್ಲಿ ವಾದಿ ಎಷ್ಟು ಬಾರಿ ಕೇಳಿದರೂ ಸಹ ನೋಂದಾಯಿತ ಕ್ರಯಪತ್ರ ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮೃತರಾದ ನಂತರದಲ್ಲಿ ನಾನು ಹಾಗೂ 2 ನೇ ಪ್ರತಿವಾದಿ ದಾವಾ ಶೆಡ್ಯೂಲ್ ಸ್ವತ್ತಿನ ಖಾತೆಯನ್ನು ಪೌತಿ ಆಧಾರದಲ್ಲಿ ಬದಲಾವಣೆ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ದಿಃ 20.09.2001 ರಂದು ನಾನು ಮತ್ತು 2 ನೇ ಪ್ರತಿವಾದಿ ವಾದಿಯ ಹೆಸರಿಗೆ ಹೆಚ್ಚುವರಿ ಪತ್ರವನ್ನು ಮಾಡಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. 2001 ರಲ್ಲೂ ಸಹ ಪ್ರವಾದಿಗಳಾದ ನಮಗೆ ವಾದಿ ನೋಟೀಸ್ ನೀಡಿರುತ್ತಾರೆ ಎಂದರೆ ಸರಿಯಲ್ಲ. ಜಾವೂರು ನಾರಾಣಪುರದಲ್ಲಿ ಎಕರೆಗೆ ಎಷ್ಟು ಬೆಲೆ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಪ್ರಸ್ತುತದಲ್ಲಿ ದಾವಾ ಶೆಡ್ಯೂಲ್ ಸ್ವತ್ತಿನ ಮಾರುಕಟ್ಟೆ ಬೆಲೆ ಹೆಚ್ಚಾದ ಕಾರಣ ನಿಪಿ4

ರಂತೆ ಕ್ರಯ ಕರಾರು ಪತ್ರ ಮಾಡಿಕೊಟ್ಟಿದ್ದರು ಸಹ ಇಲ್ಲ ಎಂದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ದಾವಾ ಶೆಡ್ಯೂಲ್ ಸ್ವತ್ತಿನ ಚೆಕ್ಕುಬಂದಿ ಪೂರ್ವಕ್ಕೆ ದಾಳಪ್ಪ ರವರ ಜಮೀನು, ಪಶ್ಚಿಮಕ್ಕೆ ರಾದಮ್ಮ ರವರ ಜಮೀನು, ಉತ್ತರಕ್ಕೆ ಈರಣ್ಣ ರವರ ಜಮೀನು ಮತ್ತು ದಕ್ಷಿಣಕ್ಕೆ ಗೋವಿಂದಪ್ಪ ರವರ ಜಮೀನು ಇರುತ್ತದೆ. ನಾವು ಜಾವೂರು ಗ್ರಾಮ ಬಿಟ್ಟು ಅಜ್ಜಂಪುರಕ್ಕೆ ಬಂದು 40-50 ವರ್ಷ ಆಗಿದ್ದರೂ ಸಹ ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇರುವುದಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಯೇ ದಾವಾ ಶೆಡ್ಯೂಲ್ ಸ್ವತ್ತಿನ ಸ್ವಾಧೀನದಲ್ಲಿ ಇದ್ದು ಉಳುಮೆ ಮಾಡುತ್ತಿರುತ್ತಾರೆ ಎಂದರೆ ಸರಿಯಲ್ಲ. ದುರುದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ. ತರೀಕೆರೆ

(ಸಂಚಾರಿ ನ್ಯಾಯಾಲಯ ಅಜ್ಜಂಪುರ)

ಸಾಕ್ಷಿಯ ಸಹಿ: